**IX. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ರವಿಯು ಬಡ ಕುಟುಂಬದ ವಿದ್ಯಾರ್ಥಿ. 10ನೇ ತರಗತಿಯಲ್ಲಿ ಓದುತ್ತಿದ್ದಾನೆ. ಮನೆಗೆ ಆರ್ಥಿಕ ಸಹಾಯವಾಗಲೆಂದು ಕೇಟರಿಂಗ್ ಕೆಲಸಕ್ಕೆ ಕೆಲವೊಮ್ಮೆ ಹೋಗುತ್ತಿದ್ದ. ಕ್ರಮೇಣ ಕುಡಿಯುವ ಚಟಕ್ಕೆ ಬಲಿಯಾಗಿ ಪರೀಕ್ಷೆ ಬರೆಯಲು ಸಾಧ್ಯವಾಗುವುದಿಲ್ಲ.
   - **a) ಬಡತನವನ್ನು ನಿವಾರಿಸಲು ರವಿಯ ಆಯ್ಕೆ ಸರಿಯಾಗಿತ್ತೆ?**
   - **b) ರವಿಯು ಏನು ಜಾಗ್ರತೆ ವಹಿಸಬೇಕಾಗಿತ್ತು?**
   - **c) ನೀನು ರವಿಗೆ ನೀಡುವ ಸೂಚನೆಗಳೇನು?**

2. ಕವಿತ ಮತ್ತು ಗೀತಾ ಒಳ್ಳೆಯ ಗೆಳತಿಯರು. ಕವಿತಳಿಗೆ ಆಧುನಿಕ ಸಂಪರ್ಕ ಮಾಧ್ಯಮದ ಪ್ರಭಾವ ಹೆಚ್ಚಾಗಿದೆ. ಈಗ ಅವಳ ಗಮನ ಸೌಂದರ್ಯದ ಬಗ್ಗೆ ಹೆಚ್ಚಾಗಿದೆ. ಕೆಲವೊಮ್ಮೆ ಕಲ್ಪನಾ ಲೋಕದಲ್ಲಿದ್ದು ಕನಸು ಕಾಣುತ್ತಾಳೆ.
   - **a) ವಿದ್ಯಾರ್ಥಿಗಳ ಮೇಲೆ ತುಂಬಾ ಕೆಟ್ಟ ಪ್ರಭಾವ ಬೀರುವ ಸಂಪರ್ಕ ಮಾಧ್ಯಮಗಳು ಯಾವುವು?**
   - **b) ಗೆಳತಿಯನ್ನು ಆಯ್ಕೆ ಮಾಡುವಾಗ ವಹಿಸಬೇಕಾದ ಎಚ್ಚರಿಕೆಗಳೇನು?**
   - **c) ನೀನು ಗೀತಾಳ ಸ್ಥಾನದಲ್ಲಿದ್ದರೆ ಏನು ಮಾಡುತ್ತಿದ್ದೆ?**

3. ದೀಪಿಕಾ ಮತ್ತು ಭಾಗ್ಯಶ್ರೀ ಹತ್ತನೆ ತರಗತಿಯಲ್ಲಿ ಓದುವ ಮಧ್ಯಮ ವರ್ಗದ ವಿದ್ಯಾರ್ಥಿನಿಯರು. ಕೇವಲ ಪಾಠಗಳಲ್ಲಿ ಮಗ್ನರಾಗಿದ್ದು ಯಾವುದೇ ಪಠ್ಯೇತರ ಚಟುವಟಿಕೆ, ಆಟಗಳಲ್ಲಿ ಭಾಗವಹಿಸುವುದಿಲ್ಲ ಅಥವಾ ಯಾರೊಂದಿಗೂ ಬೆರೆಯುವುದಿಲ್ಲ. ತಾವೇ ಬುದ್ದಿವಂತರು ಎಂದು ಭಾವಿಸುತ್ತಾರೆ.
   - **a) ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಆಗುವ ಲಾಭಗಳೇನು?**
   - **b) ದೀಪಿಕಾ ಮತ್ತು ಭಾಗ್ಯಶೀಯವರ ಸ್ವಭಾವದ ಬಗ್ಗೆ ನಿನಗೇನು ಅನಿಸುತ್ತದೆ?**
   - **c) ಆಟಗಳಲ್ಲಿ ಭಾಗವಹಿಸಿದರೆ ಓದಲು ಸಾಧ್ಯವೇ?**



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 09–01–2016** **ಸಮಯ : $2^1/_2$ ಘಂಟೆ**

**ತರಗತಿ : X** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ: 10x1=10**

1. ಒಬ್ಬ ಮುಖಂಡ ತಾನು ಸೇರಿದ ಗುಂಪಿನ ಚಟುವಟಿಕೆಗಳಿಗೆ ________ ಕೊಡುತ್ತಾನೆ.
   (ಮೇಲ್ವಿಚಾರಣೆ; ಪ್ರೇರಣೆ; ನಿರುತ್ಸಾಹ; ಇತರರಿಗೆ ಜವಾಬ್ದಾರರನ್ನಾಗಿ ಮಾಡುತ್ತಾನೆ)
2. ನಾವೇ ನಮಗೆ ಜನ್ಮ ಕೊಡುವುದು ____________.
   (ಜೈವಿಕ ಜನನ; ಗಳಿಕೆಯ ಜನನ; ಪ್ರೇರಿತ ಜನನ; ಆಧ್ಯಾತ್ಮಿಕ ಜನನ)
3. ದೀನತೆ ಒಂದು ವಿಧದ ________.
   (ಆಧ್ಯಾತ್ಮಿಕತೆ; ದುಷ್ಟಗುಣ; ಪರಾವಲಂಬನೆ; ದುರ್ಬಲತೆ)
4. ನಮ್ಮ ಕೀಳು ಪ್ರವೃತ್ತಿಯನ್ನು ಬಹಿರಂಗ ಪಡಿಸುವುದು ________
   (ಚಾಡಿ ಮಾತು; ಅಂಗ ವಿಕಲತೆ; ಅಪನಂಬಿಕೆ; ಬಹಿರಂಗ ಟೀಕೆ)
5. ಗೆಳೆತನಕ್ಕೆ ಶೋಭೆಯನ್ನು ತರುವುದು ________.
   (ಸತ್ಯ; ಪ್ರಾಮಾಣಿಕತೆ; ಶಾಂತಿ; ನಿಷ್ಠೆ)
6. ಸಮಯ ಮತ್ತು ________ ಯಾರನ್ನು ಕಾಯುವುದಿಲ್ಲ.
   (ಕೆಲಸ; ಪ್ರಾಯ; ಮರಣ; ಸಮುದ್ರದ ಅಲೆಗಳು)
7. ಇತರ ಜನರ ಸಮಸ್ಯೆ, ಕಷ್ಟ, ಸಂಕಟ, ವೇದನೆಗಳಿಗೆ ಸ್ಪಂದಿಸುವುದು ________
   (ಸಮಾಜ ಸಂವೇದನಾ ಶೀಲತೆ; ಸ್ವಯಂ ಸಂವೇದನೆ; ಪರ ಸಂವೇದನೆ; ಅನಾವಶ್ಯಕ ಕೆಲಸ)
8. ನಾವು ಪ್ರತಿಯೊಬ್ಬರು ________ ಒಂದು ಭಾಗವಾಗಿದ್ದೇವೆ.
   (ಭಷ್ಟಾಚಾರದ; ಅನ್ಯಾಯದ; ಮಾನವ ಸಮಾಜದ; ಸರಕಾರದ)
9. ನಮಗೆ ಅನೇಕ ವೈವಿಧ್ಯತೆಯನ್ನು ಕೊಡುವುದು ________.
   (ನಿಸರ್ಗ; ಆಕಾಶ; ಭೂಗೋಳ; ನಕ್ಷತ್ರ)
10. ಪ್ರತಿಯೊಬ್ಬರು ಸಮಾನರು ಎಂದು ಗುರುತಿಸುವ ಹಕ್ಕು ________.
    (ಆರ್ಥಿಕ ಹಕ್ಕು; ಸಾಮಾಜಿಕ ಹಕ್ಕು; ರಾಜಕೀಯ ಹಕ್ಕು; ಪರಿಸರದ ಹಕ್ಕು)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 5x1=5**

1. ವಾಸ್ತವ ________ ದೊಂದಿಗೆ ಸಂಬಂಧವನ್ನಿಟ್ಟುಕೊಳ್ಳಲು ಸಮಾಜದ ಪರಿಜ್ಞಾನ ಬೇಕೆ ಬೇಕು.
2. ಚಿಕ್ಕವರಿದ್ದಾಗ ಮೇಲ್ವರ್ಗದ ಜನರಿಂದ ತುಂಬಾ ಕಷ್ಟಗಳನ್ನು ಅನುಭವಿಸಿದವರು ________
3. ಎಲ್ಲಾ ಸುಗುಣಗಳ ಭದ್ರ ಆಸ್ತಿವಾರವೆಂದರೆ ________
4. ಪ್ರಾರ್ಥಿಸುವ ಮೊದಲು ________
5. ನಮ್ಮ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ನಮ್ಮನ್ನು ಪ್ರೀತಿಸುವವನೇ ______

**III. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ: 5x1=5**

1. ಕೆಲಸಕ್ಕೆ ಸಮಯವಿರಲಿ : **ಯಶಸ್ಸಿನ ಬೆಲೆ ಅದು** :: ಓದಲು ಸಮಯವಿರಲಿ : ____
2. ಯುವಕನಾಗಿದ್ದಾಗ : **ಸಮಯ ನಡೆಯುತ್ತಿತ್ತು** :: ದೃಢಕಾಯ ಮನುಷ್ಯನಾದಾಗ : ________
3. ಮಾತನಾಡುವ ಮೊದಲು : **ಆಲಿಸು** :: ಬರೆಯುವ ಮೊದಲು : ______
4. ಜೊಯ್ ಬಾಂಗ್ಲಾ : **ಬಾಂಗ್ಲಾ ದೇಶದ ರಾಷ್ಟ್ರಗೀತೆ** :: ಜನಗಣಮನ : ______
5. ಬೆರಳುಗಳೈದು : **ಕಾಯಕ ಒಂದೇ** :: ಕಣ್ಣುಗಳೆರಡು : _______

**IV. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ಮದರ್ ತೆರೇಜಾ | – | ದೇವರಿಗೆ ನಮ್ಮ ಕೊಡುಗೆ. |
| 2. ನಾವು ಸಾಧಿಸುವುದು | – | ದೇವರ ಸನಿಹಕ್ಕೆ ತರುತ್ತದೆ. |
| 3. ಟೀಕಿಸುವ ಮೊದಲು | – | ಜೀವನವನ್ನು ಸಂಪತ್ಭರಿತ ಗೊಳಿಸುತ್ತದೆ. |
| 4. ನಿಜವಾದ ಗೆಳೆತನ | – | ಮಿಷನರಿಸ್ ಆಫ್ ಚಾರಿಟಿ. |
| 5. ಪ್ರಾರ್ಥನೆಗೆ ಸಮಯ | – | ನಾಲಿಗೆಯನ್ನು ತಡೆ ಹಿಡಿ. |

**V. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 5x1=5**

1. ಮುಕ್ತ ಮನಸ್ಸುಳ್ಳವರಾಗಿದ್ದು ಅಕ್ಕಪಕ್ಕದ ಪರಿಸರಕ್ಕೆ ಸ್ಪಂದಿಸುವವರಾಗಲು ನಮ್ಮಲ್ಲಿ ಯಾವ ಮನೋಭಾವ ಬೇಕು?
2. ಪೀಟರ್ ಡ್ರೂಕರ್ ಸಮಯದ ಬಗ್ಗೆ ಏನು ಹೇಳಿದ್ದಾರೆ?



3. ಯಾವುದರಿಂದ ಜೀವನಕ್ಕೆ ಹೊಸತನ ಬರುತ್ತದೆ?
4. ರವೀಂದ್ರನಾಥ್ ಟಾಗೋರ್‌ರವರಿಗೆ ನೊಬೆಲ್ ಪ್ರಶಸ್ತಿ ಗಳಿಸಿಕೊಟ್ಟ ಕವನ ಸಂಕಲನ ಯಾವುದು?
5. ಸಾರ್ವತ್ರಿಕವಾದ ಎಂದರೇನು?

**VI. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ವಿದ್ಯಾರ್ಥಿಗಳು ಸಮಯದ ಉಪಯುಕ್ತ ಬಳಕೆಯನ್ನು ಹೇಗೆ ಮಾಡಬಹುದು?
2. ಗೆಳೆಯನೆಂದರೆ ಯಾರು?
3. 'ದೀನತೆ ಒಂದು ಸುಗುಣ' ಮೂರು ಕಾರಣಗಳನ್ನು ತಿಳಿಸು.
4. ಮುಖಂಡನ ಮೂಲಗಳು ಯಾವುವು?
5. ಬಹುರೂಪಿ ಸಮಾಜದಲ್ಲಿ ಐಕ್ಯತೆಯ ಮಹತ್ವವೇನು?
6. ಮಾನವ ಹಕ್ಕುಗಳನ್ನು ನಿರೂಪಿಸಿ.
7. ಸಂವೇದನಾ ಶೀಲತೆಗೆ ಎಂತಹ ಮನೋಭಾವ ಹೊಂದಿರಬೇಕು?

**VII. ಯಾವುದಾದರೂ ಆರು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ಸಾಮಾಜಿಕ ಪರಿಜ್ಞಾನದಲ್ಲಿ ನಮಗೆ ಯಾವುದರ ಬಗ್ಗೆ ಪ್ರಜ್ಞೆ ಇರಬೇಕು?
2. ಮೂರು ಹಂತದ ಸಂವೇದನಾ ಶೀಲತೆಯನ್ನು ವಿವರಿಸಿ
3. ಸಮಯ ಪೋಲು ಮಾಡಲು ಮುಖ್ಯ ಕಾರಣಗಳೇನು?
4. ಗೆಳೆತನವನ್ನು ಕಾಪಾಡುವ ಸೂತ್ರಗಳು ಯಾವುವು?
5. ನಾಲ್ಕು ವಿಧದ ಜನನಗಳನ್ನು ವಿವರಿಸಿ
6. ಮುಖಂಡನಲ್ಲಿರಬೇಕಾದ ಮುಖ್ಯ ಗುಣಗಳು ಯಾವುವು?
7. ಮಾನವ ಹಕ್ಕುಗಳ ಲಕ್ಷಣಗಳು ಯಾವುವು?
8. ಮಾನವ ಘನತೆಗೆ ದಕ್ಕೆ ತಂದ ಗಾಂಧೀಜಿವರಿಗಾದ ಅನುಭವ ಯಾವುದು?

**VIII. ಯಾವುದಾದರೂ ಎರಡು ವಿಷಯಗಳ ಬಗ್ಗೆ ವಿವರಿಸಿ ಬರೆಯಿರಿ: 2x5=10**

1. ಬಹುರೂಪಿ ಸಮಾಜ
2. ಮಾನವೀಯತೆ
3. ಚೇತನ ಪೂರ್ಣ ವ್ಯಕ್ತಿ ಮದರ್ ತೆರೇಜಾ